ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಂತಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಉಂಟಾಗಿರುವ ನೀರಿನ ಅಭಾವ ಪರಿಸ್ಥಿತಿಯು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಈ ಕ್ಷೇತ್ರಕ್ಕೆ ನೀರಿನ ವಿತರಣೆಯ ಬಗೆಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು.

ಇ) ಈ ಕ್ಷೇತ್ರದ ಜನಗಳಿಗೆ ಕುಡಿಯುವ ನೀರಿನ ವಿತರಣೆಗಾಗಿ ನೀರನ್ನು ಸಂಗ್ರಹಿಸಲು ಜಲಾಶಯಗಳನ್ನು ಕಟ್ಟುವ ಕಾರ್ಯವೇನಾದರೂ ಇದೆಯೇ?

ಶ್ರೀ ಆರ್.ರೋಷನ್ ಬೇಗ್ (ಬೆಂಗಳೂರು ನಗರಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು):-

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಈಗಿರುವ ಮೂರು ಎಂ.ಜಿ.ಡಿ. ಸಾಂದ್ರತೆಯಿರುವ ಎರಡು ಭೂಮಟ್ಟದ ಜಲಾಶಯಗಳಿಂದ ಹಾಗೂ 0.2 ಎಂ.ಜಿ.ಡಿ.ಸಾಂದ್ರತೆಯಿರುವ ಮೇಲ್ಮಟ್ಟದ ಒಂದು ಸಂಗ್ರಹಣಾ ಜಲಾಶಯಗಳಿಂದ ಶಾಂತಿ ನಗರ ವಿಧಾನಸಭಾ ಕ್ಷೇತ್ರದ ನಿವಾಸಿಗಳಿಗೆ ಸಮಪರ್ಕವಾಗಿ ನೀರು ಸರಬರಾಜು ಆಗುತ್ತಿರುವ ಕಾರಣ ಯಾವ ಹೊಸ ಜಲಾಶಯಗಳನ್ನು ಕಟ್ಟುವ ಕಾಮಗಾರಿಗಳ ಪ್ರಸ್ತಾವನೆ ಇರುವುದಿಲ್ಲ.

ವಿಷಯ:- ಶಾಂತಿನಗರ ಕ್ಷೇತ್ರದಲ್ಲಿ ಕೆಲವು ಕಡೆ ರಸ್ತೆ ದುರಸ್ತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1578 (1120)

ಶ್ರೀಮತಿ ಹೇಮಾವತಿ (ಶಾಂತಿನಗರ):- ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಂತಿನಗರ ವಿಧಾನ ಸಭಾ ಕ್ಷೇತ್ರದ ನೀಲಸಂದ್ರ, ವಿವೇಕನಗರ, ಅಕ್ಕಿತಿಮ್ಮನ ಹಳ್ಳಿ, ವಿನಾಯಕ ನಗರ ಹಾಗು ಇತರೆ ಸ್ಥಳಗಳಲ್ಲಿನ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ರಸ್ತೆಗಳ ದುರಸ್ತಿಗಾಗಿ ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ?

ಶ್ರೀ ರೋಷನ್ ಬೇಗ್(ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು):-

ಅ) ಹೌದು. ಶಾಂತಿನಗರ ವಿಧಾನ ಸಭಾ ಕ್ಷೇತ್ರದಲ್ಲಿನ ಕೆಲವು ರಸ್ತೆಗಳು ದುಸ್ಥಿತಿಯಲ್ಲಿರುವವು.

ಆ) ಈ ದುಸ್ಥಿತಿಯಲ್ಲಿಯ ರಸ್ತೆಗಳನ್ನು 1995-96ನೇ ಸಾಲಿನ ಕಾಮಗಾರಿ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಲಾಗಿದ್ದು, ಈ ರಸ್ತೆಗಳಿಗೆ ಆಸ್ಫಾಲ್ಟ್ ಮಾಡುವ ಕೆಲಸವನ್ನು ಮಳೆಗಾಲದ ನಂತರ ಕೈಗೆತ್ತಿಕೊಳ್ಳಲಾಗುವುದು.

ವಿಷಯ:- ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜಾರೋಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1580 (212)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?